## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.

## O.S. No. 449/2015

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹೇಶ ಪಿ |
| ತಂದೆಯ ಹೆಸರು | : | ಪುಟ್ಟಸ್ವಾಮಿ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವಕೀಲರು ಮತ್ತು ನೋಟರಿ ಪಬ್ಲಿಕ್ |
| ವಾಸಸ್ಥಳ | : | ನಂಜನಗೂಡು ಟೌನ್. |

**ಸಾಕ್ಷಿಯನ್ನು ದಿನಾಂಕಃ 03.04.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಗಳ ಪರ ಕು. ಎಂ.ಎಂ.ಎಸ್ , ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ ಸಾಕ್ಷಿದಾರನಾಗಿದ್ದು, ದಿನಾಂಕ 09.11.2013 ರ ಕ್ರಯದ ಕರಾರಿನ ಮೂಲಪ್ರತಿಯನ್ನು ಹಾಜರುಪಡಿಸುವಂತೆ ನ್ಯಾಯಾಲಯದಿಂದ ಸಮನ್ಸ್ ಬಂದಿದ್ದು, ಅದರಂತೆ ನಾನು ಈ ದಿನ ದಿನಾಂಕ 09.11.2013 ರ ಕ್ರಯದ ಕರಾರಿನ ಮೂಲ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಮೃತ ವಾದಿ ಮತ್ತು ಪ್ರತಿವಾದಿಗಳು ಮತ್ತು ಸಾಕ್ಷಿದಾರರು ನನ್ನ ನೋಟರಿ ಕಛೇರಿಗೆ ಬಂದು ಕ್ರಯದ ಕರಾರು ಪತ್ರ ತಯಾರು ಮಾಡಿಕೊಡಬೇಕೆಂದು ಕೇಳಿಕೊಂಡಿದ್ದು, ಅವರ ಕೋರಿಕೆಯಂತೆ ದಿನಾಂಕ 09.11.2013 ರಂದು ಕ್ರಯದ ಕರಾರು ಪತ್ರ ತಯಾರಿಸಿಕೊಟ್ಟಿರುತ್ತೇನೆ. ಸದರಿ ಪತ್ರ ತಯಾರಿಸುವ ಸಮಯದಲ್ಲಿ ಸುಮ ಮತ್ತು ಸೌಭಾಗ್ಯ ಎಂಬುವವರು ನಮ್ಮ ಕಟ್ಟಡದ ಕೆಳಭಾಗದಲ್ಲಿರುತ್ತಾರೆ ಎಂದು ಹೇಳಿದ್ದರಿಂದ ಮೂಲಪ್ರತಿಯನ್ನು ನನ್ನ ಬಳಿ ಇಟ್ಟುಕೊಂಡು, ನಂತರ ಅವರನ್ನು ಕರೆದುಕೊಂಡು ಬಂದ ನಂತರ ಮೂಲ ಪ್ರತಿಯನ್ನು ಕೊಡುವುದಾಗಿ ಹೇಳಿ ಕಳುಹಿಸಿರುತ್ತೇನೆ. ಆದ್ದರಿಂದ ಈ ಮೇಲೆ ಹೇಳಿದ ಕ್ರಯದ ಕರಾರುಪತ್ರದ ಮೂಲಪ್ರತಿ ನನ್ನ ಬಳಿ ಉಳಿದುಕೊಂಡಿರುತ್ತದೆ. ಕ್ರಯದ ಕರಾರುಪತ್ರಕ್ಕೆ ಸಹಿ ಹಾಕಿರುವ

ಪಕ್ಷಗಾರರು ಪತ್ರದಲ್ಲಿ ತಿಳಿಸಿರುವಂತೆ ವ್ಯವಹರಣೆ ಮಾಡಿಕೊಂಡಿರುತ್ತಾರೆ. ಅವರೆಲ್ಲರೂ ನನ್ನ ಸಮಕ್ಷಮ ಸಹಿ ಮಾಡಿ ಮೃತ ವಾದಿಯಿಂದ ಹಣ ಪಡೆದಿರುತ್ತಾರೆ ಮತ್ತು ಸಾಕ್ಷಿದಾರರನ್ನು ಉಭಯ ಪಕ್ಷಗಾರರೇ ಕರೆದುಕೊಂಡು ಬಂದಿದ್ದರು. ದಿನಾಂಕ 09.11.2013 ರ ಕ್ರಯದ ಕರಾರುಪತ್ರಕ್ಕೆ ಪತ್ರ ಬರಹಗಾರನಾಗಿ ನಾನು ಮೊಹರು ಹಾಕಿ ಸಹಿ ಮಾಡಿರುತ್ತೇನೆ. ಸಾಕ್ಷಿಯು ದಿನಾಂಕ 09.11.2013 ರ ಕ್ರಯದ ಕರಾರುಪತ್ರದ ಮೂಲಪ್ರತಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ದಿನಾಂಕ 09.11.2013 ರ ಕ್ರಯದ ಕರಾರುಪತ್ರವನ್ನು ನಿಪಿ-18 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು: ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

ಪ್ರಧಾನ **ಸಿವಿಲ್ ನ್ಯಾಯಾಧೀಶರು ಮತ್ತು** ಪ್ರ.ದ.ನ್ಯಾ.ದಂ,

**ನಂಜನಗೂಡು.**